# <u>ಸುಳ್ಳಿನ ಸಂಚು ಬಯಲಾಗಿದೆ</u>

**ಅರುಣ್‌ಜೇಟ್ಲಿ**
**ರಾಜ್ಯ ಸಭೆ ವಿರೋಧ ಪಕ್ಷದ ನಾಯಕರು**

**ಸತ್ಯ ಹಾಗೂ ಅಸತ್ಯದ ನಡುವೆ ಮೂಲ ವ್ಯತ್ಯಾಸವಿದೆ.ಸತ್ಯಒಗ್ಗೂಡಿಸುತ್ತದೆ.ಅಸತ್ಯ ಸಂಪೂರ್ಣ ವಿರೋಧಾಭಾಸದಿಂದಕೂಡಿದೆ.ಅದರ ಪತನಖಚಿತ.2002ರ ಗುಜರಾತ್ ದಳ್ಳುರಿ ಕುರಿತು ನರೇಂದ್ರ ಮೋದಿಯವರ ವಿರೋಧಿಗಳು ಹೆಣೆದಅಸತ್ಯವಾದ ಪಿತೂರಿಯಗತಿಇದೇಆಗಿದೆ.**

**2002ರ ಗುಜರಾತ್‌ದಂಗೆಯು ಭಾರತದಇತ್ತೀಚಿನಇತಿಹಾಸದ ನೋವಿನ ಒಂದುಅಧ್ಯಾಯವಾಗಿದೆ. ಸಬರಮತಿಎಕ್ಸಪ್ರೆಸ್‌ರೈಲಿಗೆ ಬೆಂಕಿ ಹಚ್ಚಿದ ಪ್ರಕರಣ ಮತ್ತುಅದರ ನಂತರ ಸಂಭವಿಸಿದ ದಂಗೆಗಳು ಹಲವಾರುಅಮೂಲ್ಯ ಜೀವಗಳ ಹಾನಿ, ಹಲವರಿಗೆಗಾಯ ಮತ್ತು ವ್ಯಾಪಕ ಆಸ್ತಿ ನಾಶಕ್ಕೆ ಕಾರಣವಾಯಿತು.**

**ದುರಾದೃಷ್ಟವೆಂದರೆ, ದಂಗೆಯ ಹಿಂದೆರೂಪಿಸಲಾದ ಸಂಚಿನಲ್ಲಿ ಶ್ರೀ ನರೇಂದ್ರ ಮೋದಿಯವರಕೈವಾಡವಿದೆ ಎಂಬ ಆರೋಪವನ್ನು ಹೊರಿಸಲಾಯಿತು.ಸತ್ಯಇದಕ್ಕೆ ಭಿನ್ನವಾಗಿದೆ. ಮುಂಜಾಗ್ರತಕ್ರಮವಾಗಿ ಮತ್ತುಅಪರಾಧತಡೆಉದ್ದೇಶದಿಂದಒಟ್ಟು 1,00,488 ವ್ಯಕ್ತಿಗಳನ್ನು ಸೆರೆಹಿಡಿಯಲಾಯಿತು. ಜಾತಿಅಥವಾಧಾರ್ಮಿಕ ಕಾರಣಗಳಿಗೆ ಭಾರತದಲ್ಲಿಉಂಟಾಗುವ ಪ್ರಕೋಪ ಪರಿಸ್ಥಿತಿಯಲ್ಲಿ ಸ್ವಾಧೀನಕ್ಕೆ ಪಡೆಯಲಾಗುವಯಾವುದೇ ಸಂಖ್ಯೆಗಿಂತಇದು ಹೆಚ್ಚಿನದ್ದಾಗಿದೆ. ಬೇರಾವುದೇದಂಗೆಗಿಂತಲೂ ಹೆಚ್ಚಿನಜನರು ಗಲಭೆಯುಂಟಾದಾಗ ನಡೆಯುವ ಪೋಲಿಸ್ ಗೋಲಿಬಾರ್‌ನಿಂದಅಸುನೀಗಿದ್ದಾರೆ.ಆದಕಾರಣ ಪೋಲಿಸರುದಂಗೆಯಲ್ಲಿ ಭಾಗಿಯಾಗಿದ್ದರು ಎಂಬ ಆರೋಪದಲ್ಲಿ ಹುರುಳಿಲ್ಲ. 4272 ಪ್ರಕರಣಗಳನ್ನು ದಾಖಲಿಸಲಾಗಿದೆ.1168 ಪ್ರಕರಣಗಳಲ್ಲಿ ತೀರ್ಪು ಹೊರಬಂದಿದ್ದು, ನೂರಾರುಆರೋಪಿತರಿಗೆ ಶಿಕ್ಷೆ ನೀಡಲಾಗಿದೆ.ಇಂಥಹ ಹಲವಾರು ಕ್ರಮಗಳನ್ನು ಗುಜರಾತ್ ಪೋಲಿಸರುತೆಗೆದುಕೊಂಡಿದ್ದಾರೆ.**

**2006ರಲ್ಲಿ ಮೊಟ್ಟಮೊದಲ ಬಾರಿಗೆದಂಗೆ ನಡೆದ ನಾಲ್ಕು ವರ್ಷಗಳ ನಂತರ, ಗುಜರಾತ್ ಪೋಲಿಸರೂ ಸಂಚಿನ ಭಾಗವಾಗಿದ್ದರು ಎಂಬ ಆರೋಪ ಕೇಳಿಬಂತು.ಸರ್ವೋಚ್ಚ ನ್ಯಾಯಾಲಯವೇ ಸ್ಥಾಪಿಸಿದ ವಿಶೇಷ ತನಿಖಾತಂಡಕ್ಕೆಒಂಬತ್ತು ಪ್ರಮುಖ ಪ್ರಕರಣಗಳನ್ನು ವಿಚಾರಣೆಗೆ ನೀಡಲಾಯಿತು.ಮಾಜಿ ಸಿಬಿಐ ನಿರ್ದೇಶಕಡಾ.ಆರ್.ಕೆ.ರಾಘವನ್‌ಅವರ ನೇತೃತ್ವದ ಈ ತಂಡದಅನ್ಯಸದಸ್ಯರಲ್ಲಿಯಾರೂಗುಜರಾತ್‌ರಾಜ್ಯಕ್ಕೆ ಸೇರಿದವರುಆಗಿರಲಿಲ್ಲ. ವಿಶೇಷ ತಂಡ ಪ್ರಕರಣಗಳ ತನಿಖೆ ನಡೆಸಿತು, ಇನ್ನು ಕೆಲವು ಆರೋಪಿಗಳನ್ನು ವಶಕ್ಕೆ ಪಡೆಯಿತು ಹಾಗೂ ಗುಜರಾತ್ ಪೋಲಿಸರು ಸಲ್ಲಿಸಿದ್ದ ಆರೋಪ ಪಟ್ಟಿಯಲ್ಲಿ**

ಕೆಲವಾರು ಬದಲಾವಣೆಗಳನ್ನು ಮಾಡಿತು. ವಿಶೇಷ ದಳ ಸಲ್ಲಿಸಿದ್ದ ಆರೋಪ ಪಟ್ಟಿಯನ್ನು ಸರ್ವೋಚ್ಚ ನ್ಯಾಯಾಲಯ ಸ್ವೀಕರಿಸಿತು ಹಾಗೂ ಅದರ ಪ್ರಾಮಾಣಿಕತೆಗೆ ಅಭಿನಂದಿಸಿತು.

ಶ್ರೀ ನರೇಂದ್ರ ಮೋದಿ ಅಥವಾಅವರ ಸರ್ಕಾರದಕೈವಾಡದ ಬಗ್ಗೆ ಯಾವುದೇ ಸಾಕ್ಷ್ಯಾಧಾರಗಳು ತನಿಖಾತಂಡದ ವರದಿಗಳಲ್ಲಿ ಲಭ್ಯವಿಲ್ಲದಕಾರಣ, ಶ್ರೀಮತಿ ಝಾಕಿಯಜಾಫ್ರಿಅವರು 8/6/2006ರಂದು ಹೊಸ ದೂರು ದಾಖಲಿಸಿದರು.ಮುಖ್ಯ ಮಂತ್ರಿಗಳು ಮತ್ತು 63 ಮಂದಿ ಅನ್ಯರು ರೂಪಿಸಿದ ಸಂಚಿನಿಂದ ಸಂವೈಧಾನಿಕ ಬಿಕ್ಕಟ್ಟುಏರ್ಪಟ್ಟುರಾಜ್ಯದಲ್ಲಿದಂಗೆ ನಡೆಸುವ ಬೃಹತ್ ಪ್ರಮಾಣದ ಪಿತೂರಿಗೆ ಪುಷ್ಠಿದೊರೆಯಿತು ಎಂಬ ದೂರು ಸಲ್ಲಿಸಲಾಯಿತು.ನಾನಾವತಿಆಯೋಗದ ಮುಂದೆ ಆಕೆ 2003ರಲ್ಲಿ ಅಂದರೆ ಮೂರು ವರ್ಷಗಳ ಹಿಂದೆ ನೀಡಿದ ಹೇಳಿಕೆಯಲ್ಲಿ ಈ ಆರೋಪಗಳು ಇರಲಿಲ್ಲ. ಆಕೆಯ ಹೇಳಿಕೆಯಲ್ಲಿ ನೀಡಿದ ಸಂಚಿನ ಆಗುಹೋಗುಗಳ ವಿವಿರಣೆದೋಷಪೂರಿತವಾಗಿದ್ದವು.ತಮ್ಮ ಸಿಟ್ಟನ್ನು ವ್ಯಕ್ತಪಡಿಸುವಅವಕಾಶವನ್ನು ಹಿಂದು ಸಮುದಾಯಕ್ಕೆ ನೀಡಬೇಕುಎಂದುಗಾಂಧಿನಗರದ ಮುಖ್ಯಮಂತ್ರಿಗಳ ಮನೆಯಲ್ಲಿ 27/2/2002ರಂದು ನಡೆದ ಸಭೆಯಲ್ಲಿ ಉಪಸ್ಥಿತರಿದ್ದ ದಿವಂಗತ ಶ್ರೀ ಹರೀನ್ ಪಾಂಡ್ಯ ಹಾಗೂ ಪೋಲಿಸ್ ಜಿಲ್ಲಾ ವರಿಷ್ಠರಾದ ಶ್ರೀ ಸಂಜೀವ್ ಭಟ್ಅವರಿಗೆ ಮುಖ್ಯಮಂತ್ರಿಗಳು ಸಂಕೇತ ನೀಡಿದ್ದರುಎಂಬುದು ಆಕೆ ನೀಡಿದದೂರಿನ ಪ್ರಮುಖಅಂಶವಾಗಿದೆ. ದಿವಂಗತ ಹರೀನ್ ಪಾಂಡ್ಯಅವರದೂರವಾಣಿ ಕರೆಗಳ ದಾಖಲೆ ನೋಡಿದಾಗಅವರುಗಾಂಧಿನಗರದಲ್ಲಿದ್ದ ವಿಚಾರ ಸ್ಪಷ್ಟವಾದಾಗ, ಆಕೆ ತನ್ನಆರೋಪವನ್ನು ಸಿದ್ದಪಡಿಸುವ ಗೋಜಿಗೆ ಹೋಗಲಿಲ್ಲ. ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾಎಂಟು ಅಧಿಕಾರಿಗಳ ವಿಚಾರಣೆಯನ್ನು ವಿಶೇಷ ತನಿಖಾತಂಡ ನೆರವೇರಿಸಿತು.ಸಂಜೀವ್ ಭಟ್ಅವರೂ ಸಹ ಸಭೆಯಲ್ಲಿಇರಲಿಲ್ಲ ಮತ್ತು ಮುಖ್ಯಮಂತ್ರಿಗಳು ಯಾವುದೇ ಸಂಕೇತ ನೀಡಿರಲಿಲ್ಲವೆಂಬುದು ಸ್ಪಷ್ಟವಾಯಿತು.ದಾಖಲೆಗಳ ಪ್ರಕಾರ ಸಂಜೀವ್ ಭಟ್ಅಹಮದಾಬಾದ್‌ನಲ್ಲಿ ಉಪಸ್ಥಿತರಿದ್ದರು ಮತ್ತು ನಂತರದ ದಿವಸಗಳಲ್ಲಿ ಅವರುಗಾಂಧಿನಗರದಲ್ಲಿಇರುವಂತೆರುಜುವಾತು ಪಡಿಸಲು ಸುಳ್ಳು ಸಾಕ್ಷ್ಯಾಧಾರಗಳನ್ನು ಸೃಷ್ಟಿಸುವ ಸಂಚಿನಲ್ಲಿ ಕೆಲವು ಅನ್ಯ ವ್ಯಕ್ತಿಗಳೊಂದಿಗೆ ಕೈಜೋಡಿಸಿದರು.ಸರ್ವೋಚ್ಚ ನ್ಯಾಯಾಲಯವು ಈ ವಿಚಾರದತನಿಖೆ ನಡೆಸುವಂತೆ 27/11/2007ರಂದು ಆದೇಶ ಹೊರಡಿಸಿತು.ಪಿತೂರಿಯಲ್ಲಿ ಶಾಮೀಲಾಗಿರುವರೆಂಬ ಆರೋಪ ಹೊತ್ತಎಲ್ಲಾ 63 ಅಧಿಕಾರಿಗಳ ವಿಚಾರಣೆಯನ್ನು ವಿಶೇಷ ತನಿಖಾತಂಡತೆಗೆದುಕೊಂಡಿತು.ಸುಮಾರುಒಂಬತ್ತು ತಾಸಿಗೂ ಮೀರಿ ಮುಖ್ಯ ಮಂತ್ರಿಗಳ ವಿಚಾರಣೆಯನ್ನು ನಡೆಸಲಾಯಿತು.ಲಭ್ಯವಿದ್ದಎಲ್ಲಾ ಸಾಕ್ಷಿಗಳನ್ನು ವಿಚಾರಿಸಲಾಯಿತು ಮತ್ತು 24/4/2011ರಂದು ಸರ್ವೋಚ್ಚ ನ್ಯಾಯಾಲಯಕ್ಕೆ ವರದಿ

ಸಲ್ಲಿಸಲಾಯಿತು.ವರದಿಯಲ್ಲಿ ಶ್ರೀ ನರೇಂದ್ರ ಮೋದಿಯವರ ವಿರುದ್ಧಯಾವುದೇದೂರುದಾಖಲಾಗಲಿಲ್ಲ. ವಿಶೇಷ ತಂಡದ ವರದಿಯಿಂದಅತೃಪ್ತ ಫಿರ್ಯಾದಿ, ನ್ಯಾಯಾಲಯದ ಆಪ್ತ ಸಲಹೆಗಾರರನ್ನು ನೇಮಿಸುವಂತೆಅರ್ಜಿ ಸಲ್ಲಿಸಿದರು.ಆಪ್ತ ಸಲಹೆಗಾರರು 25/4/2011 ರಂದುತಮ್ಮ ಸಲಹೆ ನೀಡಿದರು.ವಿಶೇಷ ತಂಡವು ಸಿಆರ್‌ಪಿಸಿಯ ಪರಿಚ್ಛೇದ 173ರಡಿ ತಮ್ಮ ವರದಿಯನ್ನು ಮೇಜಿಸ್ಟ್ರೇಟರಿಗೆ ಸಲ್ಲಿಸುವಂತೆ 12/4/2011ರಂದು ಆದೇಶಿಸಲಾಯಿತು.ಆಪ್ತ ಸಲಹೆಗಾರರ ವರದಿಯನ್ನು ಪಡೆಯುವಅವಕಾಶವನ್ನೂಅವರಿಗೆ ನೀಡಲಾಯಿತು.ಅಂದಿನಿಂದ ಮೇಜಿಸ್ಟ್ರೇಟ್ ನ್ಯಾಯಾಲಯಎಲ್ಲಾ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಿದೆ, ದೂರಿನ ಆಕ್ಷೇಪಗಳನ್ನು ಅವಲೋಕಿಸಿದೆ, ಸವಿಸ್ತಾರವಾಗಿ ಪಾಟಿಸವಾಲು ಪೂರ್ಣಗೊಳಿಸಿದೆ ಹಾಗೂ ಅಂತಿಮವಾಗಿ ಶ್ರೀ ನರೇಂದ್ರ ಮೋದಿಯವರ ವಿರುದ್ಧದ ಆರೋಪಗಳ ಪ್ರಕರಣವನ್ನು ವಜಾಗೊಳಿಸುವ ನಿರ್ಧಾರತೆಗೆದುಕೊಂಡಿದೆ.ಅಪರಾಧದಲ್ಲಿ ಮುಖ್ಯಮಂತ್ರಿಗಳನ್ನು ಸಿಲುಕಿಸುವ ಸುಳ್ಳಿನ ಸಂಚಿಗೆ ಪರಾಜಯವಾಗಿದ್ದು ಸಂಚು ಬಯಲಾಗಿದೆ.

ಮೇಲ್ಕಂಡ ವಿಚಾರಗಳಿಂದ ಕೆಲವು ರೋಚಕ ಫಲಿತಾಂಶಗಳು ಹೊರಹೊಮ್ಮುತ್ತವೆ. ಕಾಂಗ್ರೆಸ್ ಪಾರ್ಟಿ ಹಾಗೂ ಅದರ ಪೋಷಣೆ ಪಡೆದ ಸರ್ಕಾರೇತರ ಸೇವಾ ಸಂಸ್ಥೆಗಳು ಶ್ರೀ ನರೇಂದ್ರ ಮೋದಿಯವರೊಂದಿಗೆರಾಜಕೀಯ ಸಂಘರ್ಷ ನಡೆಸುವ ಸಾಮರ್ಥ್ಯ ಹೊಂದಿಲ್ಲ. ಆದ್ದರಿಂದಲೇಅವರು ಸಿಬಿಐ, ವಿಶೇಷ ತನಿಖಾತಂಡ, ನ್ಯಾಯಿಕ ಹೋರಾಟ ಹಾಗೂ ಮಾಧ್ಯಮಗಳ ಮೂಲಕ ಅವರತೇಜೋವಧೆಗೆ ವಿಫಲ ಪ್ರಯತ್ನಗಳನ್ನು ನಡೆಸುತ್ತಿವೆ. ಅವರು ರೂಪಿಸಿದ ಸಂಚಿನಲ್ಲಿ ಹಲವಾರು ಲೋಪದೋಷಗಳು ಕಂಡುಬಂದವು. ಕಾಂಗ್ರೆಸ್ ಹಾಗೂ ಅದರ ಸಮರ್ಥಕ ಸರ್ಕಾರೇತರ ಸೇವಾ ಸಂಸ್ಥೆಗಳು ರೂಪಿಸಿದ್ದ ರಾಜಕೀಯ ಷಡ್ಯಂತ್ರಕ್ಕೆ ಅಧಿಕಾರಿಗಳ ಸಣ್ಣಗುಂಪೊಂದು ಮಾರ್ಗದರ್ಶಕರಂತೆ ವರ್ತಿಸಿದೆ.ಸುಳ್ಳು ಸಾಕ್ಷ್ಯಗಳನ್ನು ಸೃಷ್ಟಿಸಿದವರು ಅವರೇ.ಅಸತ್ಯವನ್ನೇ ಸತ್ಯವೆಂದು ಪ್ರತಿಪಾದಿಸಲು ಕೆಲವು ಅಂತರ್ಜಾಲಗಳು ಸತತ ಪ್ರಯತ್ನ ನಡೆಸಿವೆ.

ಪ್ರತಿಸ್ಪರ್ಧಿಗಳ ಹೋಲಿಕೆಯಲ್ಲಿ, ಶ್ರೀ ನರೇಂದ್ರ ಮೋದಿ ರಾಜಕೀಯವಾಗಿ ಹೆಚ್ಚು ಬಲಾಢ್ಯರಾಗಿ ಹೊರಹೊಮ್ಮಿದ್ದಾರೆ.ಟೀಕಾಚಾರ್ಯರು, ವೈರತ್ವಭಾವದ ಕೆಲವು ಮಾಧ್ಯಮಗಳು ಹಾಗೂ ಪ್ರಚೋದಿತ ಸರ್ಕಾರೇತರ ಸೇವಾ ಸಂಸ್ಥೆಗಳನ್ನು ಅವರು ಎದುರಿಸಿದ್ದಾರೆ. ಆದರೂತಮ್ಮಏಕಚಿತ್ತತೆಗೆ ಭಂಗ ಬರದಂತೆ ಸ್ಥಿರವಾಗಿದ್ದಾರೆ.ಗುಜರಾತ್‌ಅಭಿವೃದ್ಧಿಯತಮ್ಮ ಪರಮಗುರಿ ಸಾಧನೆಗೆ ಸಂಪೂರ್ಣ ಗಮನ ಹರಿಸಿದ ಅವರುಜನಸಾಮಾನ್ಯರಿಗೆ ನೇರ ಸಂವಹನ ನಡೆಸುವಲ್ಲಿ ಸಫಲರಾಗಿದ್ದಾರೆ.ಆದ್ದರಿಂದಲೇಅವರು 2002, 2007 ಹಾಗೂ 2012ರಲ್ಲಿ ನಡೆದರಾಜ್ಯ ಚುನಾವಣೆಗಳಲ್ಲಿ ಯಶಸ್ಸು ಗಳಿಸಿದ್ದಾರೆ.ಅಂತ್ಯದಲ್ಲಿ, ಅವರಜನಪ್ರಿಯತೆಗೆ

ಮುದನೀಡುವ ನ್ಯಾಯಿಕತೀರ್ಪು ವಿಶೇಷ ತನಿಖಾತಂಡದ ವರದಿಯಂತೆ ಶ್ರೀ ನರೇಂದ್ರ ಮೋದಿ ಅವರನ್ನು ನಿರಪರಾಧಿಎಂದು ಪರಿಗಣಿಸಿದ್ದು ಸಾಕ್ಷ್ಯಾಧಾರಗಳನ್ನು ತಿರುಚಿದವರನ್ನು ದೂಷಿಸಿದೆ.ತೇಜೋವಧೆಗೆ ಪ್ರಯತ್ನಿಸಿದ ಅಪಪ್ರಚಾರದಿಂದ ಮುಕ್ತರಾಗಿ ಸ್ಪಟಿಕದಂತೆ ಸ್ವಚ್ಛವಾದ ವರ್ಚಸ್ಸಿನೊಂದಿಗೆ ಅವರು 2014ರ ಚುನಾವಣಾ ಪ್ರಚಾರಕ್ಕೆ ಇಳಿದ್ದಿದ್ದಾರೆ. ಕಾನೂನು ಯೋಗ್ಯ ಸಾಕ್ಷ್ಯಾಧಾರಗಳಿಗೆ ಅಪಪ್ರಚಾರ ಎಂದಿಗೂ ಪರ್ಯಾಯವಾಗಲಾರದು.

✵✵✵✵✵